ಕಛೇರಿ ದೂರವಾಣಿ : +91 80 23354039
+91 80 23354085
ಇ–ಮೇಲ್: com-hfws@karnataka.gov.in

# ಆಯುಕ್ತಾಲಯ
## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
### ಕನ್ನಡ ಕಾಯಕ ವರ್ಷಾಚರಣೆ

ಸಂಖ್ಯೆ : NVBDCP/COVID19/EST7K/2020-21 ದಿನಾಂಕ: 29.11.2021

**ಸುತ್ತೋಲೆ**

ವಿಷಯ: ಕೋವಿಡ್ 19 – ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ನಿಯೋಜಿಸುವ ಕುರಿತು. .

ಉಲ್ಲೇಖ: ದಿನಾಂಕ: 29.11.2021ರಂದು ನಡೆದ ಸಭೆಯಲ್ಲಿ ನಿರ್ಧರಿಸಿದಂತೆ.

ಪ್ರಸ್ತುತ, ರಾಜ್ಯದಲ್ಲಿ ಕೋವಿಡ್ 19ನ ರೂಪಾಂತರಿ 'ಓಮಿಕ್ರಾನ್' ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ಈಗಾಗಲೇ ಸೂಚಿತವಾಗಿರುವ At Risk ದೇಶಗಳಿಂದ ಕರ್ನಾಟಕಕ್ಕೆ ಬರುವ ಅಂತರರಾಷ್ಟ್ರ ಪ್ರಯಾಣಿಕರನ್ನು ನಿಯಮಾನುಸಾರ ತಪಾಸಣೆ ನಡೆಸುವುದು ಅಗತ್ಯವಾಗಿರುತ್ತದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಚಟುವಟಿಕೆಯನ್ನು ಕೈಗೊಳ್ಳಲು , ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಲಾ ಎರಡು ವೈದ್ಯಾಧಿಕಾರಿಗಳು ಹಾಗೂ ನಾಲ್ಕು ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ಮುಂದಿನ ಆದೇಶದವರೆಗೂ ನಿಯೋಜಿಸಲು ಸೂಚಿಸಿದೆ.

ನಿಯೋಜಿತರಿಗೆ ವಾಹನದ ವ್ಯವಸ್ಥೆಯನ್ನು ಕಲ್ಪಿಸುವುದು ಆಯಾ ಜಿಲ್ಲಾ ಆರೋಗ್ಯಾಧಿಕಾರಿಗಳು ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಪಾಳಿಯ ವ್ಯವಸ್ಥೆ ಹಾಗೂ ಸಂಬಂಧಪಟ್ಟ ಇತರ ಮಾಹಿತಿಗಾಗಿ , ವ್ಯವಸ್ಥಾಪಕ ನಿರ್ದೇಶಕರು – ಬಿ ಐ ಎ ಎಲ್, ಇವರನ್ನು ಸಂಪರ್ಕಿಸಲು ಸೂಚಿಸಿದೆ.

29.11.21

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು,**

1. ಜಿಲ್ಲಾ ಆರೋಗ್ಯಾಧಿಕಾರಿಗಳು, ಕೋಲಾರ/ ಬೆಂಗಳೂರು ಗ್ರಾಮಾಂತರ.
2. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಕೋಲಾರ/ ಬೆಂಗಳೂರು ಗ್ರಾಮಾಂತರ.

**ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.**

1. ಜಿಲ್ಲಾಧಿಕಾರಿಗಳು, ಕೋಲಾರ/ ಬೆಂಗಳೂರು ಗ್ರಾಮಾಂತರ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು – ಜಿಲ್ಲಾ ಪಂಚಾಯತ್ , ಕೋಲಾರ/ ಬೆಂಗಳೂರು ಗ್ರಾಮಾಂತರ.
3. ವ್ಯವಸ್ಥಾಪಕ ನಿರ್ದೇಶಕರು– ಬಿ ಐ ಎ ಎಲ್ , ಬೆಂಗಳೂರು, ಇವರಿಗೆ ಚಟುವಟಿಕೆಯ ಸಮನ್ವಯ ಸಾಧಿಸಲು.
4. ವಿಮಾನ ನಿಲ್ದಾಣ ಆರೋಗ್ಯ ಪ್ರಾಧಿಕಾರ, ಬಿ ಐ ಎ ಎಲ್, ಬೆಂಗಳೂರು ಹಾಗೂ ಮಂಗಳೂರು ವಿಮಾನ ನಿಲ್ದಾಣ.
5. ಶ್ರೀಮತಿ. ಶಿಖಾ , ಐ ಎಸ್ ಎಸ್, ಸಮನ್ವಯಾಧಿಕಾರಿಗಳು – ಡೊಮೆಸ್ಟಿಕ್ ಹಾಗೂ ಅಂತರರಾಷ್ಟ್ರೀಯ ಪ್ರಯಾಣಿಕರು, ಬಿ ಐ ಎ ಎಲ್, ಬೆಂಗಳೂರು.

5ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560023.